

# ಜಪಾನಿ ಪುತ್ತರ್!

■ ಪ್ರವೀಣ ಕುಲಕರ್ಣಿ

'ಕುಟುಂಬದ ವೃಕ್ಷ ಸಿದ್ಧಪಡಿಸಿಕೊಂಡು ಬನ್ನಿ'.

ಜಪಾನ್‌ನ ಒಸಾಕಾ ಕಲಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮೇಷ್ಟ್ರು ಕೊಟ್ಟ ಈ ಅಸೈನ್‌ಮೆಂಟ್ ಪಂಜಾಬ್‌ನಲ್ಲಿರುವ ತಂದೆ ಹಾಗೂ ಜಪಾನ್‌ನಲ್ಲಿರುವ ಮಗ ಇಪ್ಪತ್ತು ವರ್ಷಗಳ ಬಳಿಕ ಮತ್ತೆ ಒಂದಾಗುವಂತೆ ಮಾಡಿದೆ. ಇಷ್ಟೊಂದು ದೀರ್ಘ ಅವಧಿಯ ಬಳಿಕ ಮತ್ತೆ ಅಪ್ಪನನ್ನು ಬಿಗಿದಪ್ಪಿದ ಜಪಾನ್‌ನ ರಿನ್ ತಾಕಾಹಾಟನ ಮೊಗ ಹರ್ಷದಿಂದ ಹುಣ್ಣಿಮೆಯ ಚಂದ್ರನಂತೆ ಅರಳಿದೆ.

ವಿಶ್ವವಿದ್ಯಾಲಯದಲ್ಲಿ ಅಸೈನ್‌ಮೆಂಟ್ ವಹಿಸಿದ ಮೇಲೆ ರಿನ್, ತನ್ನ ಕುಟುಂಬ ವೃಕ್ಷದ ನಕ್ಷೆಯನ್ನು ಬಿಡಿಸತೊಡಗಿದ. ಆಗ ಕೇವಲ ಅಮ್ಮನ ಪೂರ್ವಜರ ಮಾಹಿತಿ ಸಿಕ್ಕಿತು. ಅಪ್ಪನ ವಂಶದ ವಿವರ ಬೇಕಲ್ಲ ಎಂದು ರಿನ್ ಕೇಳಿದಾಗ, ಆತನ ಅಮ್ಮ ಭಾರತದ ವಿಳಾಸವಿರುವ ಚೀಟಿಯೊಂದನ್ನು ನೀಡಿದರು. ರಿನ್, ಅಪ್ಪನನ್ನು ಹುಡುಕಿಕೊಂಡು ಭಾರತಕ್ಕೆ ಬಂದೇ ಬಿಟ್ಟ. ಅಮ್ಮ ಕೊಟ್ಟ ವಿಳಾಸದ ಚೀಟಿ ಹಿಡಿದು ಅಮೃತಸರದ ಆ ಗಲ್ಲಿಯನ್ನು ಇಂಚಿಂಚು ಬಿಡದಂತೆ ಸುತ್ತಿದರೂ ಅಪ್ಪ ಪತ್ತೆ ಆಗಲಿಲ್ಲ. ಅಪ್ಪನ ಚಿತ್ರವನ್ನು ಜತೆಗೆ ತಂದಿದ್ದ ಆತ, 'ಇವರು ಗೊತ್ತೆ' ಎಂದು ದಾರಿಹೋಕರನ್ನು ಕೇಳಿದ. ಚಿತ್ರ ನೋಡಿದ ನೂರಾರು ಮಂದಿ ತಮಗೆ ಗೊತ್ತಿಲ್ಲ ಎಂದು ತಲೆ ಅಲ್ಲಾಡಿಸಿದರು. ಆದರೆ, ಕೊನೆಗೊಬ್ಬ ಅಂಗಡಿಕಾರ, 'ಅರೆ, ಈತ ನಮ್ಮ ಸುಖ್‌ಪಾಲ್ ಸಿಂಗ್. ಈಗ ಈ ಬಡಾವಣೆ ತೊರೆದು ಬೇರೆ ಕಡೆಗೆ ಮನೆ ಮಾಡಿದ್ದಾನೆ. ಬಾ ತೋರಿಸುವೆ' ಎಂದು ಕರೆದುಕೊಂಡು ಹೋದರು. ಅಪ್ಪನನ್ನು ಕಂಡ ರಿನ್, ಓಡಿ ಹೋಗಿ ಬಿಗಿದಪ್ಪಿದ. 20 ವರ್ಷಗಳ ಬಳಿಕ ತಂದೆ ಮಗ ಸಮಾಗಮವಾದ ಕ್ಷಣ ಅದು.

'ಏನಿದು ಜಪಾನಿ ಪುತ್ತರ್' ಕಥೆ ಎಂದು ಸುಖ್‌ಪಾಲ್ ಸಿಂಗ್ ಅವರನ್ನು ಕೇಳಿದರೆ ದೊಡ್ಡ ಕಥೆಯನ್ನೇ ಬಿಚ್ಚಿಡುತ್ತಾರೆ. ಎರಡೂವರೆ ದಶಕಗಳ ಹಿಂದಿನ ಮಾತು. ಆಗ ಥಾಯ್ಲೆಂಡ್‌ಗೆ ಹೋಗಿದ್ದ ಸಿಂಗ್ ಸಾಹೇಬರು ಭಾರತಕ್ಕೆ ವಾಪಸ್ ಆಗುತ್ತಿದ್ದರು. ಅವರ ಪಕ್ಕದಲ್ಲಿ ಕುಳಿತವರು ಜಪಾನಿ ಯುವತಿ ಸಾಚಿಯೆ. ಸಹಪ್ರಯಾಣಿಕರಾದ ಇಬ್ಬರೂ ಲೋಕಾಭಿರಾಮವಾಗಿ ಹರಟೆ ಹೊಡೆದರು. ಭಾರತಕ್ಕೆ ಬರುತ್ತಿರುವುದು ಏಕೆಂದು ಸುಖ್‌ಪಾಲ್ ಕೇಳಿದರು. ತಾಜ್ ನೋಡಲು ಆಗ್ರಾಕ್ಕೆ ಹೊರಟಿರುವುದಾಗಿ ಸಾಚಿಯೆ ಉತ್ತರಿಸಿದರು. 'ನಮ್ಮ ಅಮೃತಸರ ಸ್ವರ್ಣ ಮಂದಿರ ಏಕೆ ಬಿಡುತ್ತೀರಾ? ನೋಡಲು ಬನ್ನಿ' ಎಂದು 'ಪಂಜಾಬ್ ಕೀ ಪುತ್ತರ್' ಸಿಂಗ್ ಆಹ್ವಾನಿಸಿದರು. ಆಹ್ವಾನವನ್ನು ಕೂಡಲೇ ಒಪ್ಪಿದ ಸಾಚಿಯೆ, ಅಮೃತಸರಕ್ಕೆ ಹೋಗಿ ಸುಖ್‌ಪಾಲ್ ಅವರ ಮನೆಯಲ್ಲಿ ಹದಿನೈದು ದಿನ ತಂಗಿದರು. ಸ್ವರ್ಣ ಮಂದಿರವನ್ನಲ್ಲದೆ ಸುತ್ತಲಿನ ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನೂ ನೋಡಿದರು. ಇಬ್ಬರೂ ಸೇರಿ ತಾಜ್ ಮಹಲ್‌ಗೂ ಹೋಗಿಬಂದರು. ಪ್ರೇಮದ ಮಹಲಿಗೆ ಭೇಟಿ ನೀಡಿ ಬರುವಾಗ ಇಬ್ಬರ ನಡುವೆ ಪ್ರೀತಿಯೂ ಮೊಳಕೆಯೊಡೆಯಿತು.

ಜಪಾನ್‌ಗೆ ಹೋದ ಸಾಚಿಯೆ, ಸುಖ್‌ಪಾಲ್ ಅವರನ್ನು ತಮ್ಮ ದೇಶಕ್ಕೆ ಕರೆಸಿಕೊಂಡರು. ಇಬ್ಬರೂ ಮದುವೆಯಾಗಿ ಸಂಸಾರ ಹೂಡಿದರು. ತಾರಾ ಹೋಟೆಲ್‌ವೊಂದರಲ್ಲಿ ಸುಖ್‌ಪಾಲ್ ಷೆಫ್ ಆದರು. ಮರು ವರ್ಷವೇ ರಿನ್ ಜನನವಾಯಿತು. ಅಷ್ಟರಲ್ಲಿ ದಂಪತಿಯ ನಡುವೆ ಬಿರುಕು ಮೂಡಲು ಶುರುವಾಗಿತ್ತು. ಸಂಬಂಧಗಳನ್ನು ಉಳಿಸಿಕೊಳ್ಳುವ ಯತ್ನಗಳೆಲ್ಲ ವಿಫಲವಾದಾಗ 2004ರಲ್ಲಿ ವಿಚ್ಛೇದನ ಮಾಡಿಕೊಂಡರು. ಆ ವೇಳೆಗೆ ರಿನ್‌ಗೆ ಒಂದು ವರ್ಷವಾಗಿತ್ತು. ಆಗ ನೋಡಿದ್ದೇ ಕೊನೆ, ತಂದೆ–ಮಗ ಮತ್ತೆ ಒಬ್ಬರನ್ನೊಬ್ಬರು ನೋಡಿರಲಿಲ್ಲ.

ಭಾರತಕ್ಕೆ ವಾಪಸಾದ ಸುಖ್‌ಪಾಲ್ ಅವರು ಎರಡನೇ ಮದುವೆಯಾದರು. ಅವರಿಗೊಬ್ಬ ಮಗಳು ಇದ್ದಾಳೆ. ಅಪ್ಪನನ್ನು ಹುಡುಕಿಕೊಂಡು ಬಂದ ರಿನ್‌ಗೆ ರಾಖಿ ಕಟ್ಟಿದ್ದಾಳೆ. ಅಪ್ಪನನ್ನು ಹುಡುಕಿಕೊಂಡು ಬಂದ ಜಪಾನ್‌ನ ಆ ಹುಡುಗನಿಗೆ ಅಪ್ಪನ ಜತೆಗೆ ತಂಗಿಯೂ ಸಿಕ್ಕಿದ್ದಾಳೆ. ಸುಖ್‌ಪಾಲ್ ಸಿಂಗ್, ತಮ್ಮ ಮಗನಿಗೆ ಸ್ವರ್ಣ ಮಂದಿರವಲ್ಲದೆ ವಾಘಾ ಗಡಿಯನ್ನೂ ತೋರಿಸಿಕೊಂಡು ಬಂದಿದ್ದಾರೆ. ಜಪಾನ್‌ನಲ್ಲಿ ಅಮ್ಮ ಜತನದಿಂದ ಕಾಪಿಟ್ಟದ್ದ ಹಳೆಯ ಚಿತ್ರಗಳನ್ನು ಅಪ್ಪನ ಮುಂದೆ ಹರಡಿ, ಅವರ ಮನದಂಗಳದಲ್ಲಿ ನೆನಪುಗಳ ಮೆರವಣಿಗೆ ಹೊರಡುವಂತೆ ಮಾಡಿದ್ದಾನೆ ರಿನ್. ಪಂಜಾಬ್‌ನ ಭರ್ಜರಿ ಔತಣಕೂಟದ ಸೊಬಗನ್ನೂ ಆತ ಉಂಡಿದ್ದಾನೆ. ಸಿಂಗ್ ಪರಿವಾರ, ರಿನ್ ಎದುರು 'ಮಖನಿ'ಯ ಗುಡ್ಡವನ್ನೇ ಇಟ್ಟು, ಅಸಲಿ ಪಂಜಾಬಿ ರಸಪಾಕವನ್ನು ಉಣಬಡಿಸಿದೆ. ಸುಖ್‌ಪಾಲ್ ಅವರ ಪತ್ನಿ ಗುರ್ವಿಂದರ್‌ಜೀತ್ ಕೌರ್, ರಿನ್‌ನನ್ನು ತಮ್ಮ ಮಗನಾಗಿ ಸ್ವೀಕರಿಸಿದ್ದಾರೆ. ಸಾಚಿಯೆ ಅವರೊಂದಿಗೂ ಸುಖ್‌ಪಾಲ್ ಮಾತನಾಡಿದ್ದು, ಜಪಾನ್‌ಗೆ ಬಂದುಹೋಗುವ ವಾಗ್ದಾನವನ್ನು ಕೊಟ್ಟಿದ್ದಾರೆ. ಪ್ರತಿವರ್ಷ ಅಮೃತಸರಕ್ಕೆ ಬರುವುದಾಗಿ ರಿನ್ ಸಹ ಅಪ್ಪನಿಗೆ ಭರವಸೆ ಕೊಟ್ಟಿದ್ದಾನೆ. ವಿಶ್ವವಿದ್ಯಾಲಯದ ಒಂದು ಪುಟ್ಟ ಅಸೈನ್‌ಮೆಂಟ್ ದೊಡ್ಡ ಚಮತ್ಕಾರ ಮಾಡಿದೆ. ಅಪ್ಪ ಸಿಕ್ಕ ಸಂಭ್ರಮದಲ್ಲಿ ರಿನ್ ತೇಲಾಡುತ್ತಿದ್ದಾನೆ. ತಂದೆ–ಮಗನ ನಡುವೆ ಮೊಬೈಲ್ ಕರೆಗಳೂ ವಿನಿಮಯ ಆಗುತ್ತಿವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65